(ಈ) ಭದ್ರಾವತಿ ಮತ್ತು ಶಿವಮೊಗ್ಗ ತಾಲ್ಲೂಕಿನ ಕೆಲವು ಹಳ್ಳಿಗಳು ಗ್ರಾಮಪಂಚಾಯಿತಿಗೂ, ನಗರಸಭೆಗೂ ಮತ್ತು ಪುರಸಭೆಗೂ ಸೇರಿಲ್ಲವಾದ್ದರಿಂದ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆ.

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಕೆಲವು ಗ್ರಾಮಗಳು ನಗರ ಸಭೆಯ ವ್ಯಾಪ್ತಿಗೂ ಬರುವುದಿಲ್ಲ, ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೂ ಬರುವುದಿಲ್ಲ. ಈ ರೀತಿ ಅನೇಕ ಗ್ರಾಮಗಳಿವೆ. ಶಿವಮೊಗ್ಗ ತಾಲ್ಲೂಕಿನ ತುಬಂಳ್ಳಿ, ಭದ್ರಾವತಿ ತಾಲ್ಲೂಕಿನ ಒರಿಯೂರು ಮತ್ತು ನಂಜಾಪುರ ಗ್ರಾಮದ 200-300 ಜನ ರೈತರು ಬಂದಿದ್ದಾರೆ. ಹಾಗಾಗಿ ಅವು ಆ ಒಂದು ಗ್ರಾಮ ಪಂಚಾಯಿತಿಗೆ ಬಾರದೆ ಇರುವುದರಿಂದ, ಜಿಲ್ಲಾ ಪಂಚಾಯಿತಿಗೆ ಚುನಾವಣೆ ನಡೆಯುವತನಕ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸಚಿವರು) : ಮಾನ್ಯ ಅಧ್ಯಕ್ಷರೆ, ಭದ್ರಾವತಿ ಮತ್ತು ಶಿವಮೊಗ್ಗ ತಾಲ್ಲೂಕಿನ ಕೆಲವು ಹಳ್ಳಿಗಳು ಗ್ರಾಮ ಪಂಚಾಯಿತಿಗೂ ಸೇರಿಲ್ಲ, ನಗರಸಭೆಗೂ ಸೇರಿಲ್ಲ, ಪುರಸಭೆಗೂ ಸೇರಿಲ್ಲ. ಹಾಗಾಗಿ ಅವುಗಳ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂಬುದು ನಿಜ. ಆ ಕೆಲಸಗಳನ್ನು ಜಿಲ್ಲಾ ಪಂಚಾಯಿತಿಯ ಮತಿಯಿಂದ ತೆಗೆದುಕೊಳ್ಳುವುದರಲ್ಲಿ ಏನು ಅಭ್ಯಂತರವಿಲ್ಲ.

ಊ) ಪಶುಸಂಗೋಪನಾ ಇಲಾಖೆಯವರಿಂದ ಜಾನುವಾರುಗಳಿಗೆ ಸಮೃದ್ಧಿ ವೀರ್ಯ ಒದಗಿಸಲು ಒತ್ತಾಯ

ಶ್ರೀ ಶ್ರೀಕಾಂತ ರುದ್ರಪ್ಪ ಅಂಬಡಗಟ್ಟಿ (ಧಾರವಾಡ) : ಸನ್ಮಾನ್ಯ ಅಧ್ಯಕ್ಷರೆ, ಹಳ್ಳಿಗಾಡುಗಳಲ್ಲಿ ಬಹಳಷ್ಟು ಕುಟುಂಬಗಳು, ತಮ್ಮ ಕುಟುಂಬ ನಿರ್ವಹಣೆಗೆ ಜಾನುವಾರುಗಳನ್ನು ಸಾಕಿಕೊಂಡು ಜೀವನ ಮಾಡುತ್ತಿದ್ದಾರೆ. ಮತ್ತು ಪಟ್ಟಣಗಳಲ್ಲಿ ತಮ್ಮ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಪಶುಂಗೋಪನೆಯನ್ನು ಕೂಡ ಅವಲಂಬಿಸಿರುತ್ತಾರೆ. ಆದರೆ ಈ ಅವಲಂಬಿತರಾಗಿರುವವರಿಗೆ ಐ.ಆರ್. ಡಿ.ಪಿ.ಸ್ಕೀಮ್, ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆ ಅಡಿಯಲ್ಲಿ ಅಥವಾ ಕೇಂದ್ರ ಸರ್ಕಾರದ ನೆರವಿನಿಂದಾಗಲಿ ಸಾಕಷ್ಟು ಜಾನುವಾರುಗಳನ್ನು ಖರೀದಿ ಮಾಡಿದ್ದರೂ ಕೂಡ, ಈ ಪಶುಸಂಗೋಪನೆ ಇಲಾಖೆಯವರು "ಕೃತಕ ಗರ್ಭದಾರಣೆ" ಏನು ಪೂರೈಸುತ್ತಿದ್ದಾರೆ, ಅದರಲ್ಲಿ ಇರುವಂಥ ದೋಷದಿಂದಾಗಿ 3-4ಸಲ ಇಂಜೆಕ್ಷನ್ ಮಾಡಿಸಿದರೂ ಕೂಡಾ ಗರ್ಭಕಟ್ಟದಂಥ ಪರಿಸ್ಥಿತಿಯಾಗಿ ಜಾನುವಾರುಗಳು ಬರಡಾಗಿವೆ. ಮೇಲಾಗಿ ಅಕ್ಟೋಬರ್ 1996ರಿಂದ ಸರ್ಕಾರದವರು ಇಂಜಕ್ಷನ್‌ಗೋಸ್ಕರ ಪ್ರತಿಯೊಂದು ಜಾನುವಾರುಗಳಿಗೆ 5 ರೂಪಾಯಿ ಚಾರ್ಜ ಮಾಡುತ್ತಾರೆ. ರೈತರಿಗೆ 5 ರೂಪಾಯಿ ಕೊಡುವುದರ ಜೊತೆಗೆ 4-5 ಸಾರಿ ಕೊಡಿಸುವುದರಿಂದ ಬಹಳಷ್ಟು ಹೊರೆಯಾಗುತ್ತದೆ. ಬ್ಯಾಂಕಿನಲ್ಲಿ ಸಾಲ ಕಟ್ಟುವುದಕ್ಕೆ ಬಹಳ ತೊಂದರೆಯಾಗುತ್ತದೆ. ಪ್ರಕೃತಿ ವಿಕೋಪದಿಂದ ಬೆಲೆ ಬರದಂಥ ಪರಿಸ್ಥಿತಿಯಲ್ಲಿ ರೈತರಿಗೆ ಸಾಕಷ್ಟು ಸರ್ಕಾರದವರು ಸಹಾಯ ಮಾಡುತ್ತಾರೆ. ಆದರೆ ಈ ಬಡ ಕುಟುಂಬಗಳಲ್ಲಿ ಯಾರು ಈ ಪಶುಸಂಗೋಪನೆ ಮೇಲೆ ತಮ್ಮ ಜೀವನವನ್ನು ನಿರ್ವಹಣೆ ಮಾಡುತ್ತಿದ್ದಾರೆ, ಅವರಿಗೆ ಸಾಕಷ್ಟು